**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕರಿಗೆ, ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಭಾಗ್ಯಲಕ್ಷ್ಮೀ ಯೋಜನೆಯ ಅಡಿಯಲ್ಲಿ ತೆರೆಯಲಾಗುವ ಸುಕನ್ಯಾ ಸಮೃದ್ಧಿ ಖಾತೆಯನ್ನು ತೆರೆಯುವ ಅರ್ಜಿಯನ್ನು ಭರ್ತಿ ಮಾಡುವ ವಿಧಾನ ಹಾಗೂ ಪಾಸ್ ಪುಸ್ತಕಗಳನ್ನು ಫಲಾನುಭವಿಗಳಿಗೆ ವಿತರಿಸುವುದರ ಬಗ್ಗೆ ಮಾಹಿತಿ.**

---------------------------------------------------------------------------------------------

ಭಾಗ್ಯಲಕ್ಷ್ಮಿ ಸುಕನ್ಯಾ ಸಮೃದ್ಧಿ ಖಾತೆಯ ಪಾಸ್ ಪುಸ್ತಕ ಬಟವಾಡೆ ಮಾಡುವ ಮೊದಲು ಕೈಗೊಳ್ಳಬೇಕಾದ ಕ್ರಮಗಳು ಏನೇನು ?

- ✓ ಸದರಿ ಪಾಸ್ ಪುಸ್ತಕದಲ್ಲಿ ನಮುದಾಗಿರುವ ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿಯ ಹೆಸರು ಮತ್ತು ಇತರೆ ವಿವರಗಳು ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆಯ ದಾಖಲೆಗಳ ಪ್ರಕಾರ ಇದೆ ಅನ್ನುವುದನ್ನು ಖಾತ್ರಿ ಪಡಿಸಿಕೊಳ್ಳಿ.
- ✓ ಪಾಸ್ ಪುಸ್ತಕಕ್ಕೆ ಸಂಬಂಧಿಸಿದ ಸುಕನ್ಯಾ ಸಮೃದ್ಧಿ ಖಾತೆಯ ಭರ್ತಿ ಮಾಡಿದ ಅರ್ಜಿ ಸಹ ಬಂದಿರುತ್ತದೆಯೋ ಎಂದು ಪರಿಶೀಲಿಸಿ ಖಾತ್ರಿ ಪಡಿಸಿಕೊಳ್ಳಿ.
- ✓ ಫಲಾನುಭವಿಯ ಪೋಷಕರನ್ನು ಸಂಪರ್ಕಿಸಿ ಹಾಗೂ ಮಗುವಿನ ಹೆಸರಲ್ಲಿ ಈಗಾಗಲೇ ಇನ್ನೊಂದು ವೈಯಕ್ತಿಕವಾಗಿ ದೇಶದ ಯಾವುದೇ ಅಂಚೆ ಕಚೇರಿ ಅಥವಾ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಸುಕನ್ಯ ಸಮೃದ್ಧಿ ಖಾತೆ ತೆರೆದಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಿ.
- ✓ ಈಗಾಗಲೇ ಫಲಾನುಭವಿ ಮಗುವಿನ ಹೆಸರಿನಲ್ಲಿ ವೈಯಕ್ತಿಕವಾಗಿ ಸುಕನ್ಯಾ ಸಮೃದ್ಧಿ ಖಾತೆಯನ್ನು ತೆರೆದಿದ್ದಾರೆ ಎಂದಾದಲ್ಲಿ ಅದರ ಪಾಸ್ ಪುಸ್ತಕವನ್ನು ತರಲು ಹೇಳಿ. **?**
- ✓ ಸುಕನ್ಯಾ ಸಮೃದ್ಧಿ ಖಾತೆಯ ಅರ್ಜಿ ಭರ್ತಿ ಮಾಡುವ ಮೊದಲು ಸಂಬಂಧಿಸಿದ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿ ಇದೆಯಾ ಎಂದು ಖಚಿತ ಪಡಿಸಿಕೊಳ್ಳಿ.

1. ಭಾಗ್ಯಲಕ್ಷ್ಮೀ ಯೋಜನೆಯ ಅಡಿ ತೆರೆದ ಪಾಸ್ ಪುಸ್ತಕವನ್ನು ಸಂಬಂಧಿಸಿದ ಪೋಷಕರಿಗೆ ಹಸ್ತಾಂತರಿಸುವ ಮೊದಲು ಈ ಕೆಳಗಿನ ಸನ್ನಿವೇಶಗಳನ್ನು ಪರಿಶೀಲಿಸತಕ್ಕದ್ದು.

   ಸನ್ನಿವೇಶ **– 1** : ಭಾಗ್ಯಲಕ್ಷ್ಮೀ ಯೋಜನೆಯ ಅಡಿ ಬೆಂಗಳೂರು ಜಿಪಿಒ ದಲ್ಲಿ ತೆರೆಯಲಾದ ಸುಕನ್ಯಾ ಸಮೃದ್ಧಿ ಖಾತೆ ಯೊಂದನ್ನು ಹೊರತು ಪಡಿಸಿ ಬೇರೆ ಯಾವ ಸುಕನ್ಯಾ ಸಮೃದ್ಧಿ ಖಾತೆಯೂ ಫಲಾನುಭವಿ ಮಗುವಿನ ಹೆಸರಲ್ಲಿ ಇಲ್ಲ.

   ಸನ್ನಿವೇಶ **– 2** : ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿ ಮಗುವಿನ ಹೆಸರಲ್ಲಿ ಎರಡು ಸುಕನ್ಯಾ ಸಮೃದ್ಧಿ ಖಾತೆ ಇದ್ದಲ್ಲಿ - ಮೊದಲನೆಯದು ದೇಶದ ಯಾವುದೇ ಅಂಚೆ ಕಚೇರಿ / ಬ್ಯಾಂಕ್ ನಲ್ಲಿ ವೈಯಕ್ತಿಕವಾಗಿ ಮೊದಲೇ ಸುಕನ್ಯಾ ಸಮೃದ್ಧಿ ಖಾತೆ ತೆರೆದಿ ದ್ದು ಹಾಗೂ ತದ ನಂತರ ಭಾಗ್ಯಲಕ್ಷ್ಮಿ ಯೋಜನೆಯ ಅಡಿ ಸುಕನ್ಯಾ ಸಮೃದ್ಧಿ ಖಾತೆ ತೆರೆಯಲ್ಪಟ್ಟಲ್ಲಿ.

   ಸನ್ನಿವೇಶ **– 3** : ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿ ಮಗುವಿನ ಹೆಸರಲ್ಲಿ ಎರಡು ಸುಕನ್ಯಾ ಸಮೃದ್ಧಿ ಖಾತೆ ಇದ್ದಲ್ಲಿ - ಮೊದಲನೆಯದು ಭಾಗ್ಯಲಕ್ಷ್ಮೀ ಯೋಜನೆಯಡಿ ಬೆಂಗಳೂರು ಜಿಪಿಒದಲ್ಲಿ ತೆರೆಯಲಾದ ಸುಕನ್ಯಾ ಸಮೃದ್ಧಿ ಖಾತೆ ಆಗಿದ್ದು ತದನಂತರ ಯಾವುದೇ ಅಂಚೆ ಕಚೇರಿ ಅಥವಾ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಎರಡನೇ ಸುಕನ್ಯಾ ಸಮೃದ್ಧಿ ಖಾತೆ ತೆರೆಯಲ್ಪಟ್ಟಲ್ಲಿ

   ಉದಾಹರಣೆಗೆ :

   **0123456789(B) -** ಭಾಗ್ಯಲಕ್ಷ್ಮೀ ಯೋಜನೆಯಡಿ ಬೆಂಗಳೂರು ಜಿಪಿಒದಲ್ಲಿ ತೆರೆಯಲಾದ ಸುಕನ್ಯಾ ಸಮೃದ್ಧಿ ಖಾತೆ ಮತ್ತು **9876543210(P) -** ಯಾವುದೇ ಅಂಚೆ ಕಚೇರಿ ಅಥವಾ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ವೈಯಕ್ತಿಕವಾಗಿ ತೆರೆಯಲಾದ ಸುಕನ್ಯಾ ಸಮೃದ್ಧಿ ಖಾತೆ ಎಂದು ತಿಳಿದರೆ,

| | ಕ್ರಮಬದ್ಧ ಖಾತೆ (ಖಾತೆ-1) | ಕ್ರಮಬದ್ಧವಲ್ಲದ ಖಾತೆ (ಖಾತೆ-2) |
|---|---|---|
| ಸನ್ನಿವೇಶ – 1 | ಖಾತೆ ಸಂಖ್ಯೆ : **0123456789(B)**<br>ಖಾತೆ ತೆರೆದ ದಿನಾಂಕ : 16-02-2021 | ಖಾತೆ ಸಂಖ್ಯೆ : ಇಲ್ಲ |
| ಸನ್ನಿವೇಶ – 2 | ಖಾತೆ ಸಂಖ್ಯೆ : **9876543210(P)**<br>ಖಾತೆ ತೆರೆದ ದಿನಾಂಕ : 01-01-2021 | ಖಾತೆ ಸಂಖ್ಯೆ : **0123456789(B)**<br>ಖಾತೆ ತೆರೆದ ದಿನಾಂಕ : 16-02-2021 |
| ಸನ್ನಿವೇಶ – 3 | ಖಾತೆ ಸಂಖ್ಯೆ : **0123456789(B)**<br>ಖಾತೆ ತೆರೆದ ದಿನಾಂಕ : 16-02-2021 | ಖಾತೆ ಸಂಖ್ಯೆ : **9876543210(P)**<br>ಖಾತೆ ತೆರೆದ ದಿನಾಂಕ : 01-03-2021 |

2. ಒಂದಕ್ಕಿಂತ ಹೆಚ್ಚು ಸುಕನ್ಯಾ ಸಮೃದ್ಧಿ ಖಾತೆಗಳು ಒಂದು ಭಾಗ್ಯಲಕ್ಷ್ಮೀ ಯೋಜನೆಯ ಅಡಿಯಲ್ಲಿ ಇರುವ ಸಂಧರ್ಭದಲ್ಲಿ ಮೊದಲು ತೆರೆದ ಖಾತೆಯನ್ನು ಗುರುತಿಸುವುದು ಹೇಗೆ?

   ಭಾಗ್ಯಲಕ್ಷ್ಮೀ ಯೋಜನೆಯ ಅಡಿಯಲ್ಲಿ ತೆರೆಯಲಾದ ಸುಕನ್ಯಾ ಸಮೃದ್ಧಿ ಯೋಜನಾ ಖಾತೆಯ ಪಾಸ್ ಪುಸ್ತಕವನ್ನು ಮತ್ತು ಸದರಿ ಫಲಾನುಭವಿಯ ಹೆಸರಲ್ಲಿ ಫಲಾನುಭವಿಯ ತಂದೆ ಅಥವಾ ತಾಯಿ ಅಥವಾ ಪೋಷಕರು ವೈಯಕ್ತಿಕವಾಗಿ ಯಾವುದೇ ಅಂಚೆ ಕಚೇರಿ ಅಥವಾ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ತೆರೆದ ಸುಕನ್ಯಾ ಸಮೃದ್ಧಿ ಖಾತೆಯ ಪಾಸ್ ಪುಸ್ತಕವನ್ನು ಕೈಗೆತ್ತಿಕೊಳ್ಳಿ. ಎರಡೂ ಖಾತೆಯ ಪಾಸ್ ಪುಸ್ತಕದ ಪ್ರಕಾರ ಖಾತೆ ತೆರೆದ ದಿನಾಂಕವನ್ನು ಪರಿಶೀಲಿಸಿ. ಯಾವ ಖಾತೆಯನ್ನು ತೆರೆದ ದಿನಾಂಕದ ಪ್ರಕಾರ ಮೊದಲು ತೆರೆಯಲಾಗಿದೆಯೋ ಅದು ಮೊದಲು ತೆರೆದ ಖಾತೆಯಾಗಿರುತ್ತದೆ.

3. ಒಂದಕ್ಕಿಂತ ಜಾಸ್ತಿ ಸುಕನ್ಯಾ ಸಮೃದ್ಧಿ ಖಾತೆ ಫಲಾನುಭವಿ ಹೆಸರಲ್ಲಿ ಇದ್ದಾಗ ಯಾವುದು ಕ್ರಮಬದ್ಧ ( Regular ) ಮತ್ತು ಯಾವ ಖಾತೆ ಕ್ರಮಬದ್ಧವಲ್ಲದ ( irregular ) ಎಂದು ಗುರುತಿಸುವುದು.

   ಅ) ವೈಯಕ್ತಿಕವಾಗಿ ಪೋಷಕರು (ತಂದೆ/ತಾಯಿ/ಕಾನೂನು ಪ್ರಕಾರ ಪೋಷಕರು) ತೆರೆದ ಖಾತೆ ಮೊದಲೇ ತೆರೆದಿದ್ದಲ್ಲಿ (ಖಾತೆ ತೆರೆದ ದಿನಾಂಕ ಪ್ರಕಾರ) ಆ ಖಾತೆ ಕ್ರಮಬದ್ಧ ಖಾತೆ ( Regular Account) ಎಂದು ಗುರುತಿಸಲಾಗುವುದು. ಅಂತಹ ಸಂದರ್ಭದಲ್ಲಿ ನಂತರ ತೆರೆಯಲಾದ ಭಾಗ್ಯಲಕ್ಷ್ಮೀ ಸುಕನ್ಯಾ ಸಮೃದ್ಧಿ ಖಾತೆಯನ್ನು ಕ್ರಮಬದ್ಧವಲ್ಲದ ( Irregular Account ) ಎಂದು ಗುರುತಿಸಲಾಗುವುದು

   ಆ) ಭಾಗ್ಯಲಕ್ಷ್ಮೀ ಯೋಜನೆಯ ಅಡಿ ಫಲಾನುಭವಿಯ ಹೆಸರಿನಲ್ಲಿ ತೆರೆದ ಖಾತೆಯನ್ನು ಮೊದಲೇ ತೆರೆದಿದ್ದಲ್ಲಿ (ಖಾತೆ ತೆರೆದ ದಿನಾಂಕ ಪ್ರಕಾರ) ಆ ಖಾತೆಯನ್ನು ಕ್ರಮಬದ್ಧ ಖಾತೆ ( regular account) ಎಂದು ಗುರುತಿಸಲಾಗುವುದು. ಆನಂತರ ಆ ಮಗುವಿನ ತಂದೆ / ತಾಯಿ / ಕಾನೂನು ಪ್ರಕಾರ ಪೋಷಕರು ಇನ್ನೊಂದು ಸುಕನ್ಯಾ ಸಮೃದ್ಧಿ ಖಾತೆಯನ್ನು ವೈಯಕ್ತಿಕವಾಗಿ ಯಾವುದೇ ಅಂಚೆ ಕಚೇರಿಯಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ತೆರೆದಿದ್ದಲ್ಲಿ ಅಂತಹ ಖಾತೆಯನ್ನು ಕ್ರಮಬದ್ಧವಲ್ಲದ ಖಾತೆ (irregular account) ಎಂದು ಗುರುತಿಸಲಾಗುವುದು.

4. ಸನ್ನಿವೇಶ – 2 ಪ್ರಕಾರ ಕ್ರಮಬದ್ಧ ಖಾತೆ ಎಂದು ಗುರುತಿಸಿದ ಖಾತೆ ಯಾವುದೇ ಅಂಚೆ ಕಚೇರಿಯಲ್ಲಿ ವೈಯಕ್ತಿಕವಾಗಿ ಫಲಾನುಭವಿಯ ತಂದೆ/ತಾಯಿ / ಕಾನೂನು ರೀತ್ಯಾ ಪೋಷಕರಿಂದ ತೆರೆಯಲ್ಪಟ್ಟಿದ್ದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳು ಏನು?
   - ✓ ಭಾಗ್ಯಲಕ್ಷ್ಮೀ ಸುಕನ್ಯಾ ಸಮೃದ್ಧಿ ಖಾತೆ ತೆರೆಯಲು ಬಂದ ಅರ್ಜಿಯನ್ನು ಭರ್ತಿ ಮಾಡಬೇಕಾಗಿಲ್ಲ. ಅರ್ಜಿ ನಮೂನೆಯನ್ನು ಹಿಂತುರುಗಿಸಿ
   - ✓ ವೈಯಕ್ತಿಕವಾಗಿ ಅಂಚೆ ಕಚೇರಿಯಲ್ಲಿ ತೆರೆದ ಸುಕನ್ಯಾ ಸಮೃದ್ಧಿ ಖಾತೆಯನ್ನು ಬೆಂಗಳೂರು ಜಿ.ಪಿ.ಓ. ಗೆ ವರ್ಗಾವಣೆ ಮಾಡಲು ವರ್ಗವಣಾ ಅರ್ಜಿಯನ್ನು ಭರ್ತಿ ಮಾಡಿ ಸಹಿ ಪಡೆಯಿರಿ. ಜೊತೆಗೆ ಪಾಸ್ ಪುಸ್ತಕವನ್ನು ಲಗತ್ತಿಸಿ.
   - ✓ ಭಾಗ್ಯಲಕ್ಷ್ಮೀ ಸುಕನ್ಯಾ ಖಾತೆ ಇಂತಹ ಸಂಧರ್ಭದಲ್ಲಿ ಕ್ರಮಬದ್ಧವಲ್ಲದ ಖಾತೆ ಎಂದು ಗುರುತಿಸಲಾಗಿದ್ದು ಸದರಿ ಖಾತೆಯನ್ನು ಬಡ್ಡಿ ರಹಿತವಾಗಿ ಮುಕ್ತಾಯಗೊಳಿಸಲು ಅರ್ಜಿ

ಪಡೆಯಿರಿ. ಹಾಗೂ ಇನ್ನು ಮುಂದೆ ಪ್ರತೀ ವರ್ಷ ಸರಕಾರದಿಂದ ಕೊಡಲಾಗುವ ರೂ. 3000/- ವನ್ನು ಮೊದಲೇ ತೆರೆದ ಸುಕನ್ಯಾ ಸಮೃದ್ಧಿ ಖಾತೆಯನ್ನು ಭಾಗ್ಯಲಕ್ಷ್ಮೀ ಯೋಜನೆಯ ಖಾತೆಯೆಂದು ಪರಿಗಣಿಸಿ ಆ ಖಾತೆ ಗೆ ಜಮಾ ಮಾಡಲು ನಿವೇದನೆಯೊಂದಿ ಗೆ ಸಂಬಂದಿತ ಮಹಿಳಾ ಹಾಗೂ ಮಕ್ಕಳ ಯೋಜನಾಧಿಕಾರಿಯ ಸಹಿಯ ಅಧಿಕೃತ ದೃಡೀಕರಣ ಪಡೆಯಿರಿ. ಖಾತೆದಾರರ ಭಾಗ್ಯಲಕ್ಷ್ಮೀ ಪಾಸ್ ಪುಸ್ತಕವನ್ನು ಲಗತ್ತಿಸಿ.

- ✓ ಮೇಲ್ಕಾಣಿಸಿದ ಎಲ್ಲಾ ದಾಖಲೆಗಳನ್ನು ಸ್ಥಳೀಯ ಅಂಚೆ ಅಧೀಕ್ಷಕರ ಮೂಲಕ "ಚೀಫ್ ಪೋಸ್ಟ್ ಮಾಸ್ಟರ್ , ಬೆಂಗಳೂರು ಜಿ.ಪಿ.ಓ. 560 001." ಇವರಿಗೆ ಜಿಲ್ಲಾ ಮಟ್ಟದ ಉಪ ನಿರ್ದೇಶಕರ ಮೂಲಕ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿ.

5. ಸನ್ನಿವೇಶ 2 ರ ಪ್ರಕಾರ ಕ್ರಮಬದ್ದ ಖಾತೆ ಎಂದು ಗುರುತಿಸಿದ ಖಾತೆ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ತೆರೆಯಲ್ಪಟ್ಟಿದ್ದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು.
   - ಭಾಗ್ಯಲಕ್ಷ್ಮೀ ಸುಕನ್ಯಾ ಸಮೃದ್ಧಿ ಖಾತೆ ತೆರೆಯಲು ಬಂದ ಅರ್ಜಿಯನ್ನು ಭರ್ತಿ ಮಾಡಬೇಕಾಗಿಲ್ಲ. ಅರ್ಜಿ ನಮೂನೆಯನ್ನು ಹಿಂತಿರುಗಿಸಿ
   - ವೈಯಕ್ತಿಕವಾಗಿ ಬ್ಯಾಂಕ್ ನಲ್ಲಿ ತೆರೆದ ಸುಕನ್ಯಾ ಸಮೃದ್ಧಿ ಖಾತೆಯನ್ನು ಬೆಂಗಳೂರು ಜಿ.ಪಿ.ಓ. ಗೆ ವರ್ಗಾವಣೆ ಮಾಡಲು ವರ್ಗವಣಾ ಅರ್ಜಿಯನ್ನು ಭರ್ತಿ ಮಾಡಿ ಸಹಿ ಪಡೆಯಿರಿ. ಜೊತೆಗೆ ಪಾಸ್ ಪುಸ್ತಕವನ್ನು ಲಗತ್ತಿಸಿ.
   - ಭಾಗ್ಯಲಕ್ಷ್ಮೀ ಸುಕನ್ಯಾ ಖಾತೆ ಇಂತಹ ಸಂಧರ್ಭದಲ್ಲಿ ಕ್ರಮಬದವಲ್ಲದ ಖಾತೆ ಎಂದು ಗುರುತಿಸಲಾಗಿದ್ದು ಸದರಿ ಖಾತೆಯನ್ನು ಬಡ್ಡಿ ರಹಿತವಾಗಿ ಮುಕ್ತಾಯಗೊಳಿಸಲು ಅರ್ಜಿ ಪಡೆಯಿರಿ. ಹಾಗೂ ಇನ್ನು ಮುಂದೆ ಪ್ರತೀ ವರ್ಷ ಸರಕಾರದಿಂದ ಕೊಡಲಾಗುವ ರೂ. 3000/- ವನ್ನು ಮೊದಲೇ ತೆರೆದ ಹಾಗೂ ಬೆಂಗಳೂರು ಜಿ.ಪಿ.ಓ. ಗೆ ವರ್ಗಾವಣೆ ಮಾಡಲು ಅರ್ಜಿ ನೀಡಲಾದ ಸುಕನ್ಯಾ ಸಮೃದ್ಧಿ ಖಾತೆಯನ್ನು ಭಾಗ್ಯಲಕ್ಷ್ಮೀ ಯೋಜನೆಯ ಖಾತೆಯೆಂದು ಪರಿಗಣಿಸಿ ಆ ಖಾತೆ ಗೆ ಜಮಾ ಮಾಡಲು ನಿವೇದನೆಯೊಂದಿ ಗೆ ಸಂಭಂದಿತ ಮಹಿಳಾ ಹಾಗೂ ಮಕ್ಕಳ ಯೋಜನಾಧಿಕಾರಿಯ ಸಹಿಯ ಅಧಿಕೃತ ದೃಡೀಕರಣ ಪಡೆಯಿರಿ. ಖಾತೆದಾರರ ಭಾಗ್ಯಲಕ್ಷ್ಮೀ ಪಾಸ್ ಪುಸ್ತಕವನ್ನು ಲಗತ್ತಿಸಿ.
   - ಮೇಲ್ಕಾಣಿಸಿದ ಎಲ್ಲಾ ದಾಖಲೆಗಗಳನ್ನು ಸ್ಥಳೀಯ ಅಂಚೆ ಅಧೀಕ್ಷಕರ ಮೂಲಕ "ಚೀಫ್ ಪೋಸ್ಟ್ ಮಾಸ್ಟರ್ , ಬೆಂಗಳೂರು ಜಿ.ಪಿ.ಓ. 560 001." ಇವರಿಗೆ ಜಿಲ್ಲಾ ಮಟ್ಟದ ಉಪ ನಿರ್ದೇಶಕರ ಮೂಲಕ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿ.

6. ಸನ್ನಿವೇಶ – 3 ರ ಪ್ರಕಾರ ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿ ಮಗುವಿನ ಹೆಸರಲ್ಲಿ ಎರಡು ಸುಕನ್ಯಾ ಸಮೃದ್ಧಿ ಖಾತೆ ಇದ್ದಲ್ಲಿ - ಮೊದಲನೆಯದು ಭಾಗ್ಯಲಕ್ಷ್ಮೀ ಯೋಜನೆಯಡಿ ಬೆಂಗಳೂರು ಜಿಪಿಓದಲ್ಲಿ ತೆರೆಯಲಾದ ಸುಕನ್ಯಾ ಸಮೃದ್ಧಿ ಖಾತೆ ಆಗಿದ್ದು ತದನಂತರ ಯಾವುದೇ ಅಂಚೆ ಕಚೇರಿಯಲ್ಲಿ ಎರಡನೇ ಸುಕನ್ಯಾ ಸಮೃದ್ಧಿ ಖಾತೆ ತೆರೆಯಲ್ಪಟ್ಟಲ್ಲಿ

   - ಮೊದಲೇ ತೆರೆದ (ಖಾತೆ ತೆರೆದ ದಿನಾಂಕ ಪ್ರಕಾರ) ಭಾಗ್ಯಲಕ್ಷ್ಮೀ ಯೋಜನೆಯ ಅಡಿ ತೆರೆದ ಸುಕನ್ಯಾ ಸಮೃದ್ಧಿ ಖಾತೆಯನ್ನು ಕ್ರಮಬದ್ದ ಖಾತೆ ( regular account) ಎಂದು ಗುರುತಿಸಲಾಗುವುದು.
   - ಭಾಗ್ಯಲಕ್ಷ್ಮೀ ಯೋಜನೆಯ ಸುಕನ್ಯಾ ಸಮೃದ್ಧಿ ಖಾತೆ ತೆರೆಯುವ ಅರ್ಜಿಯನ್ನು ಭರ್ತಿ ಮಾಡಿ ಖಾತೆದಾರರ , ಸಾಕ್ಷಿಯ , ಮೇಲ್ವಿಚಾರಕರ ಸಹಿ ಪಡೆದು , ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿ ದೃಡೀಕರಣ ಪಡೆದ ಅರ್ಜಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸುವುದು
   - ವೈಯಕ್ತಿಕವಾಗಿ ನಂತರ ತೆರೆದ (ಖಾತೆ ತೆರೆದ ದಿನಾಂಕ ಪ್ರಕಾರ) ಸುಕನ್ಯಾ ಸಮೃದ್ಧಿ ಖಾತೆಯನ್ನು ಕ್ರಮಬದ್ದವಲ್ಲದ ( irregular account) ಖಾತೆ ಯೆಂದು ಗುರುತಿಸಿ ಅವಧಿ ಪೂರ್ವವಾಗಿ ಮುಕ್ತಾಯಗೊಳಿಸಲು ಇರುವ ಅರ್ಜಿಯ ನಮೂನೆಯನ್ನು ಸಂಬಂಧಿತ ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿಯ ತಂದೆ / ತಾಯಿ / ಕಾನೂನು ರೀತ್ಯಾ ಪೋಷಕರಿಗೆ ಕೊಟ್ಟು ಆ ಸುಕನ್ಯಾ ಸಮೃದ್ಧಿ ಖಾತೆಯನ್ನು ಅದು ತೆರೆದಿರುವ ಸಂಬಂಧಿತ

ಅಂಚೆ ಕಚೇರಿಯಲ್ಲೇ ಮುಕ್ತಾಯಗೊಳಿಸಿ ಆ ಬಗ್ಗೆ ದಾಖಲೆ ಪ್ರಸ್ತುತ ಪಡಿಸುವಂತೆ ವಿನಂತಿಸಿಕೊಳ್ಳಿ.

- ಮೇಲ್ಕಾಣಿಸಿದಂತೆ ಖಾತೆ ಮುಕ್ತಾಯಗೊಳಿಸಿದ್ದನ್ನು ಖಚಿತ ಪಡಿಸಿಕೊಂಡ ನಂತರ ಭಾಗ್ಯಲಕ್ಷ್ಮೀ ಯೋಜನೆಯ ಅಡಿ ತೆರೆಯಲಾದ ಸುಕನ್ಯಾ ಸಮೃದ್ಧಿ ಖಾತೆಯ ಪಾಸ್ ಪುಸ್ತಕವನ್ನು ಫಲಾನುಭವಿ ಮಗುವಿನ ಪೋಷಕರು (ತಾಯಿ) ಗೆ ಹಸ್ತಾಂತರಿಸಿ ಅವರು ಪಾಸ್ ಪುಸ್ತಕವನ್ನು ಪಡೆದ ಬಗ್ಗೆ ಸೂಕ್ತ ಸಹಿ ಪಡೆದು ದಾಖಲೆ ಇಟ್ಟುಕೊಳ್ಳಿ.
- ಮೇಲ್ಕಾಣಿಸಿದ ಎಲ್ಲಾ ದಾಖಲೆಗಗಳನ್ನು ಸ್ಥಳೀಯ ಅಂಚೆ ಅಧೀಕ್ಷಕರ ಮೂಲಕ "ಚೀಫ್ ಪೋಸ್ಟ್ ಮಾಸ್ಟರ್ , ಬೆಂಗಳೂರು ಜಿ.ಪಿ.ಓ. 560 001." ಇವರಿಗೆ ಜಿಲ್ಲಾ ಮಟ್ಟದ ಉಪ ನಿರ್ದೇಶಕರ ಮೂಲಕ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿ.

7. ಸನ್ನಿವೇಶ – 3 ರ ಪ್ರಕಾರ ಭಾಗ್ಯಲಕ್ಷ್ಮೀ ಯೋಜನೆಯ ಫಲಾನುಭವಿ ಮಗುವಿನ ಹೆಸರಲ್ಲಿ ಎರಡು ಸುಕನ್ಯಾ ಸಮೃದ್ಧಿ ಖಾತೆ ಇದ್ದಲ್ಲಿ - ಮೊದಲನೆಯದು ಭಾಗ್ಯಲಕ್ಷ್ಮೀ ಯೋಜನೆಯಡಿ ಬೆಂಗಳೂರು ಜಿಪಿಓದಲ್ಲಿ ತೆರೆಯಲಾದ ಸುಕನ್ಯಾ ಸಮೃದ್ಧಿ ಖಾತೆ ಆಗಿದ್ದು ತದನಂತರ ಯಾವುದೇ <u>ರಾಷ್ಟ್ರೀಕೃತ ಬ್ಯಾಂಕ್</u> ನಲ್ಲಿ ಎರಡನೇ ಸುಕನ್ಯಾ ಸಮೃದ್ಧಿ ಖಾತೆ ತೆರೆಯಲ್ಪಟ್ಟಲ್ಲಿ
   - ಮೊದಲೇ ತೆರೆದ (ಖಾತೆ ತೆರೆದ ದಿನಾಂಕ ಪ್ರಕಾರ) ಭಾಗ್ಯಲಕ್ಷ್ಮೀ ಯೋಜನೆಯ ಅಡಿ ತೆರೆದ ಸುಕನ್ಯಾ ಸಮೃದ್ಧಿ ಖಾತೆಯನ್ನು ಕ್ರಮಬದ್ಧ ಖಾತೆ ( regular account) ಎಂದು ಗುರುತಿಸಲಾಗುವುದು.
   - ಭಾಗ್ಯಲಕ್ಷ್ಮೀ ಯೋಜನೆಯ ಸುಕನ್ಯಾ ಸಮೃದ್ಧಿ ಖಾತೆ ತೆರೆಯುವ ಅರ್ಜಿಯನ್ನು ಭರ್ತಿ ಮಾಡಿ ಖಾತೆದಾರರ , ಸಾಕ್ಷಿಯ , ಮೇಲ್ವಿಚಾರಕರ ಸಹಿ ಪಡೆದು , ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿ ದೃಢೀಕರಣ ಪಡೆದ ಅರ್ಜಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸುವುದು
   - ವೈಯಕ್ತಿಕವಾಗಿ ನಂತರ ತೆರೆದ (ಖಾತೆ ತೆರೆದ ದಿನಾಂಕ ಪ್ರಕಾರ) ಸುಕನ್ಯಾ ಸಮೃದ್ಧಿ ಖಾತೆಯನ್ನು ಕ್ರಮಬದ್ಧವಲ್ಲದ ರೀತಿ ತೆರೆದ ( irregular account) ಖಾತೆ ಯೆಂದು ಗುರುತಿಸಿ ಅವಧಿಪೂರ್ಣವಾಗಿ ಮುಕ್ತಾಯಗೊಳಿಸಲು ಸದರಿ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಅರ್ಜಿ ಸಲ್ಲಿಸಲು ಹೇಳಿ.
   - ಖಾತೆ ಮುಕ್ತಾಯಗೊಳಿಸಲು ಏನಾದರೂ ಸಮಸ್ಯೆ ಇದ್ದಲ್ಲಿ ಸದರಿ ಖಾತೆಯನ್ನು ಆ ರಾಷ್ಟ್ರೀಕೃತ ಬ್ಯಾಂಕ್ ನಿಂದ ಬೆಂಗಳೂರು ಜಿ.ಪಿ.ಓ. ಗೆ ವರ್ಗಾವಣೆ ಮಾಡಿ ನಂತರ ಅದನ್ನು ಮುಕ್ತಾಯ ಮಾಡಿಸಿ ಕೂಡಲೇ ಅದರ ಹಣವನ್ನು ಭಾಗ್ಯಲಕ್ಷ್ಮೀ ಖಾತೆಗೆ ವರ್ಗಾಯಿಸುವಂತೆ ಕೇಳಿಕೊಳ್ಳಬಹುದು.
   - ಮೆಲ್ಕಾಣಿಸಿದಂತೆ ಖಾತೆ ಮುಕ್ತಾಯಗೊಳಿಸಿದ್ದನ್ನು ಖಚಿತ ಪಡಿಸಿಕೊಂಡ ನಂತರ ಭಾಗ್ಯಲಕ್ಷ್ಮೀ ಯೋಜನೆಯ ಅಡಿ ತೆರೆಯಲಾದ ಸುಕನ್ಯಾ ಸಮೃದ್ಧಿ ಖಾತೆಯ ಪಾಸ್ ಪುಸ್ತಕವನ್ನು ಫಲಾನುಭವಿ ಮಗುವಿನ ಪೋಷಕರು (ತಾಯಿ) ಗೆ ಹಸ್ತಾಂತರಿಸಿ ಅವರು ಅದನ್ನು ಪಡೆದ ಬಗ್ಗೆ ಸೂಕ್ತ ಸಹಿ ಪಡೆದು ದಾಖಲೆ ಇಟ್ಟುಕೊಳ್ಳಿ.
   - ಮೇಲ್ಕಾಣಿಸಿದ ಎಲ್ಲಾ ದಾಖಲೆಗಳನ್ನು ಸ್ಥಳೀಯ ಅಂಚೆ ಅಧೀಕ್ಷಕರ ಮೂಲಕ "ಚೀಫ್ ಪೋಸ್ಟ್ ಮಾಸ್ಟರ್ , ಬೆಂಗಳೂರು ಜಿ.ಪಿ.ಓ. 560 001." ಇವರಿಗೆ ಜಿಲ್ಲಾ ಮಟ್ಟದ ಉಪ ನಿರ್ದೇಶಕರ ಮೂಲಕ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿ.

8. <u>ಸುಕನ್ಯಾ ಸಮೃದ್ಧಿ ಖಾತೆ ತೆರೆಯುವ ಅರ್ಜಿ</u> (ಪೂರ್ವ ನಿಗದಿತ ಹಾಗೂ ವಿವರಗಳನ್ನು ಭರ್ತಿ ಮಾಡಲಾಗಿರುವ) ನಮೂನೆಯನ್ನು ಹಾಗೂ ಸಂಬಂಧಿಸಿದ ಕೆವೈಸಿ ಅರ್ಜಿ ನಮೂನೆಯನ್ನು ಭರ್ತಿ ಮಾಡುವಾಗ ನೆನಪಿನಲ್ಲಿ ಇಡಬೇಕಾದ ಅಂಶಗಳು

   - ಭಾಗ್ಯಲಕ್ಷ್ಮೀ ಯೋಜನೆಯ ತಂತ್ರಾಂಶದ ( NIC) ಮೂಲಕ ಭರ್ತಿ ಮಾಡಿದ ಅರ್ಜಿಯನ್ನು ನೀಡಲಾಗಿರುತ್ತದೆ.
   - ಅರ್ಜಿಯಲ್ಲಿ ಕೈಯಲ್ಲಿ ಬರೆಯುವ ಚಿಹ್ನೆ ಗಮನಿಸಿ. ಈ ಕಾಲಂ ಗಳನ್ನು ಭರ್ತಿ ಮಾಡತಕ್ಕದ್ದು.

- ಭಾವಚಿತ್ರ ಪೋಷಕರದ್ದು ಮತ್ತು ಮಗುವಿನದ್ದು 2 ಪ್ರತಿ ಪಡೆಯಿರಿ ಹಾಗೂ ಒಂದನ್ನು ಅರ್ಜಿಗೆ ಅಂಟಿಸಿ ಮತ್ತೊಂದನ್ನು ಅರ್ಜಿಯ ಜೊತೆ ಕೆವ್ಯೆಸಿ ಫಾರಂಗೆ ಲಗತ್ತಿಸಿ.
- ಕಾಲಂ-1 ರಲ್ಲಿ "date of birth certificate" ನ ನಂಬರ್ ದಾಖಲಿಸಿ.
- ಕಾಲಂ-2 ರಲ್ಲಿ –
    - ಪೋಷಕರ ಆಧಾರ ಸಂಖ್ಯೆ
    - ಪಾನ್ ಕಾರ್ಡ್ ಸಂಖ್ಯೆ (ಪಾನ್ ಕಾರ್ಡ್ ಇಲ್ಲದೇ ಇದ್ದಲ್ಲಿ form-60 ಭರ್ತಿ ಮಾಡತಕ್ಕದ್ದು)
    - CIF ಐಡಿ ಸಂಖ್ಯೆ– (ಅಂಚೆ ಕಚೇರಿಯಲ್ಲಿ ತಾಯಿ (ಪೋಷಕರ) ಬೇರೆ ಯಾವುದೇ SB / RD / TD / MIS / PPF ಇತ್ಯಾದಿ ಯಾವುದೇ ಖಾತೆಯನ್ನು ಪೋಷಕರು ಹೊಂದಿದ್ದಲ್ಲಿ ಅದರ ಪಾಸ್ ಪುಸ್ತಕದಲ್ಲಿ ದಾಖಲಾಗಿರುವ ಸಿಐಎಫ್ ಐಡಿ ಸಂಖ್ಯೆಯನ್ನು ಅರ್ಜಿಯಲ್ಲಿ ಬರೆಯಿರಿ.)
    - ದೂರವಾಣಿ ಸಂಖ್ಯೆ - ತಾಯಿಯ (ಪೋಷಕರ) ದೂರವಾಣಿ ಸಂಖ್ಯೆಯನ್ನು ದಾಖಲಿಸಿ. ತಾಯಿಯ ಬಳಿ ಮೊಬೈಲ್ ಫೋನ್ ಇಲ್ಲದಲ್ಲಿ ಕುಟುಂಬದ ಮೊಬೈಲ್ ಫೋನ್ ನ ಸಂಖ್ಯೆಯನ್ನು ನೀಡಬಹುದು.
    - ಐಡಿ (ಗುರುತು) ಪುರಾವೆ - ತಾಯಿಯ (ಪೋಷಕರ) ಆಧಾರ್ ಕಾರ್ಡ ನ ವಿವರ ಬರೆಯಿರಿ. ಆಧಾರ್ ಕಾರ್ಡ್ ಇಲ್ಲದಲ್ಲಿ ಈ ಕೆಳಗಿನ ದಾಖಲೆಗಳನ್ನು ನೀಡಬಹುದು ಅ) ವೋಟರ್ ಕಾರ್ಡ್ ಆ) ಡ್ರೈವಿಂಗ್ ಲೈಸೆನ್ಸ್ ಇ) ಪಾಸ್ ಪೋರ್ಟ್ ಈ) ಮಹಾತ್ಮ ಗಾಂಧಿ ಉದ್ಯೋಗ ಖಾತರಿಯ ಅಡಿ ನೀಡಲಾದ ಗುರುತಿನ ಚೀಟಿ.
    - ವಿಳಾಸ ಪುರಾವೆ – ಅರ್ಜಿಯಲ್ಲಿ ನೀಡಲಾದ ವಿಳಾಸದ ವಿವರವಿರುವ ದಾಖಲೆಯನ್ನು ಪ್ರಸ್ತುತ ಪಡಿಸಬೇಕು. ವಿವರವನ್ನು ಇಲ್ಲಿ ಬರೆಯಿರಿ. ಆಧಾರ್ ಕಾರ್ಡ್ ಇಲ್ಲದಿದ್ದಲ್ಲಿ ಅ) ವೋಟರ್ ಕಾರ್ಡ್ ಆ) ಡ್ರೈವಿಂಗ್ ಲೈಸೆನ್ಸ್ ಇ) ಪಾಸ್ ಪೋರ್ಟ್ ಈ) ಮಹಾತ್ಮ ಗಾಂಧಿ ಉದ್ಯೋಗ ಖಾತರಿಯ ಯೋಜನೆ ಅಡಿಯಲ್ಲಿ ನೀಡಲಾದ ಗುರುತಿನ ಚೀಟಿ.
    - 'ಮಾದರಿ ಸಹಿ' ಕಾಲಂ ನಲ್ಲಿ ಮೂರು ಬಾರಿ ಮಾದರಿ ಸಹಿ ಪಡೆಯಿರಿ
    - ಘೋಷಣೆಗಳು / declarations ಕಾಲಂ ನಲ್ಲಿ ಸುಕನ್ಯಾ ಸಮೃದ್ಧಿ ಖಾತೆಗೆ ಸಂಬಂಧಿಸಿದಂತೆ ಘೋಷಣೆಗಳನ್ನು ಓದಿ ಅರ್ಥ ಮಾಡಿಕೊಳ್ಳುವಂತೆ ಹೇಳಿ.
    - ಈಗಾಗಲೇ ಹೊಂದಿರುವ ಸುಕನ್ಯಾ ಸಮೃದ್ಧಿ ಖಾತೆಗಳ ವಿವರವನ್ನು ದಾಖಲಿಸಿ. ಇಲ್ಲಿ ಸುಕನ್ಯಾ ಸಮೃದ್ಧಿ ಖಾತೆಗಳ ವಿವರ ಮಾತ್ರ ಬರೆದರೆ ಸಾಕು.
    - ನಿಗದಿತ ಜಾಗಗಳಲ್ಲಿ ಪೋಷಕರ ಸಹಿ (ತಾಯಿಯ) ಪಡೆಯಿರಿ.
    - ಅರ್ಜಿದಾರರು ಅನಕ್ಷರಸ್ಥರಾಗಿದ್ದಲ್ಲಿ ಇಬ್ಬರು ಸಾಕ್ಷಿಯ ಸಹಿ ಪಡೆಯಿರಿ. ಫಾರಂ ಭರ್ತಿ ಮಾಡಲು ಸಹಕರಿಸಿದವರ ಸಹಿ ಪಡೆಯುವುದು ಉತ್ತಮ.

9. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಫಾರಂ ಭರ್ತಿ ಮಾಡುವಾಗ ಗಮನಿಸಬೇಕಾದ ಅಂಶಗಳು
    - ಪೋಷಕರೊಂದಿಗೆ ತೆಗೆದ ಮಗುವಿನ ಭಾವಚಿತ್ರ ಲಗತ್ತಿಸಿ.
    - ಆಧಾರ್ ಸಂಖ್ಯೆ ಇದ್ದರೆ ಅದನ್ನು ಭರ್ತಿ ಮಾಡಿ. ಒಂದು ವೇಳೆ ಆಧಾರ್ ಸಂಖ್ಯೆ ಇಲ್ಲದೇ ಇಲ್ಲದಿದ್ದಲ್ಲಿ ಸಮೀಪದ ಅಂಚೆ ಕಚೇರಿಯನ್ನು ಸಂಪರ್ಕಿಸಿ ಹೊಸದಾಗಿ ಆಧಾರ್ ನೋಂದಣಿ ಮಾಡಿಕೊಳ್ಳಲು ಸೂಕ್ತ ಕ್ರಮ ಕೈ ಗೊಳ್ಳಲು ಹೇಳಿ.
    - ಕೊನೆಯಲ್ಲಿ ಇರುವ ವಾಕ್ಯ "ಇಂತಹ ಸಂದರ್ಭದಲ್ಲಿ ಸರಕಾರದಿಂದ ಮಂಜೂರಾಗಿ ಸುಕನ್ಯಾ ಸಮೃದ್ಧಿ ಖಾತೆಗೆ ಜಮಾ ಆದ ಹಣವನ್ನು ಸರಕಾರಕ್ಕೆ ಹಿಂತಿರು ಗಿ ನೀಡಲು ನನ್ನ ಯಾವುದೇ ಅಭ್ಯಂತರ ಇಲ್ಲ ಹಾಗೂ ಈ ನಿಟ್ಟಿನಲ್ಲಿ ಯಾವುದೇ ಬಾಧ್ಯತೆಗಳಿಂದ ಅಂಚೆ ಇಲಾಖೆಯನ್ನು ಮುಕ್ತಗೊಳಿಸುತ್ತೇನೆ ಎಂದು ಈ ಮೂಲಕ ದೃಢೀಕರಿಸುತ್ತೇನೆ" ಇದನ್ನು ಹೊಡೆದು ಹಾಕಿ.

10. ಖಾತೆ ತೆರೆಯುವ ಅರ್ಜಿಯ (AOF) ಜೊತೆ ನೀಡಬೇಕಾದ ದಾಖಲೆಗಳು ಯಾವುವು?
    a) ಸಂಪೂರ್ಣವಾಗಿ ತುಂಬಿದ ಖಾತೆ ತೆರೆಯುವ ಅರ್ಜಿ (AOF)
    b) ಮಗುವಿನ ಜನನ ಪ್ರಮಾಣ ಪತ್ರ

c) ಪೂರ್ಣ ತುಂಬಿದ ಕೆ.ವೈ.ಸಿ. ಫಾರಂ
d) ಪಾನ್ (PAN) ಕಾರ್ಡ್ ಪ್ರತಿ ಸ್ವಯಂ ದೃಢೀಕೃತ
e) ಬಿ.ಪಿ.ಎಲ್. ಕಾರ್ಡ್ ಪ್ರತಿ ಸ್ವಯಂ ದೃಢೀಕೃತ
f) ಗುರುತಿನ ಪುರಾವೆಯ ದಾಖಲೆ - ತಾಯಿಯ (ಪೋಷಕರ) ಆಧಾರ್ ಕಾರ್ಡ ನ ಸ್ವಯಂ ದೃಢೀಕೃತ ಪ್ರತಿ. ಇಲ್ಲದಿದ್ದಲ್ಲಿ ಅ ) ವೋಟರ್ ಕಾರ್ಡ್ ಆ) ಪಾಸ್ ಪೋರ್ಟ್ ಇ ) ಡ್ರೈವಿಂಗ್ ಲೈಸೆನ್ಸ್ ಈ) ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯ ಅಡಿ ನೀಡಲಾದ ಗುರುತಿನ ಚೀಟಿಯ ಪ್ರತಿ (ಯಾವುದಾದರೊಂದು)
g) ಮಗುವಿನ (ಫಲಾನುಭವಿ) ಆಧಾರ್ ಕಾರ್ಡ ನ ಪೋಷಕರಿಂದ ದೃಢೀಕೃತ ಪ್ರತಿ (ಲಭ್ಯವಿದ್ದಲ್ಲಿ)
h) ವಿಳಾಸದ ಪುರಾವೆ - ಈಗಿನ ವಿಳಾಸ ಹೊಂದಿರುವ ದಾಖಲೆ – 1) ಆಧಾರ ಕಾರ್ಡ್ 2) ಪಾಸ್ ಪೋರ್ಟ್ 3) ಡ್ರೈವಿಂಗ್ ಲೈಸೆನ್ಸ್ 4) ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯಡಿ ನೀಡಲಾದ ಗುರುತಿನ ಚೀಟಿ ಇವುಗಳಲ್ಲಿ ಯಾವುದಾದರೊಂದು

11. ನೀಡಲಾದ ದಾಖಲೆಗಳನ್ನು ಗಜೆಟೆಡ್ ಅಧಿಕಾರಿಯಿಂದ ದೃಢೀಕೃತ ಸಹಿ ಪಡೆದು ಸಲ್ಲಿಸಬೇಕೇ?

ಅವಶ್ಯಕತೆ ಇರುವುದಿಲ್ಲ. ಸ್ವಯಂ ದೃಢೀಕೃತ ಅಂದರೆ ದಾಖಲೆಗಳನ್ನು ಸಲ್ಲಿಸುವಾಗ ಅವರು ಅದರ ಮೇಲೆ ದಿನಾಂಕ ಸಹಿತ ಸಹಿ ಹಾಕಿ ಕೊಡತಕ್ಕದ್ದು.

12. ವೈಯಕ್ತಿಕವಾಗಿ ತೆರೆದ ಅಥವಾ ಭಾಗ್ಯಲಕ್ಷ್ಮೀ ಯೋಜನೆಯ ಅಡಿ ತೆರೆದ 2 ನೆಯ ಸುಕನ್ಯಾ ಸಮೃದ್ದಿ ಖಾತೆಯನ್ನು ಬಡ್ಡಿ ರಹಿತವಾಗಿ ಮುಚ್ಚಲು ಸದರಿ ಖಾತೆದಾರರು ತಯಾರಿಲ್ಲದಿದ್ದಲ್ಲಿ ಏನು ಮಾಡಬೇಕು?

ಸುಕನ್ಯಾ ಸಮೃದ್ದಿ ಖಾತೆಗೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚು ಖಾತೆ ಒಂದೇ ಅರ್ಹ ಹೆಣ್ಣು ಮಗುವಿನ ಹೆಸರಲ್ಲಿ ಇರುವಂತಿಲ್ಲ . ಈ ರೀತಿಯ ಖಾತೆ ಕ್ರಮಬದ್ದವಲ್ಲದ ಖಾತೆಯೆಂದು ಗುರುತಿಸಲ್ಪಡುವುದು. ಭಾಗ್ಯಲಕ್ಷ್ಮಿ ಚೈಲ್ಡ್ ಐಡಿ ಸಮೇತ ಈ ಕ್ರಮವಲ್ಲದ ಖಾತೆಯ ವಿವರಗಳನ್ನು ಕೂಡಲೇ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಹಾಗೂ ಚೀಫ್ ಪೋಸ್ಟ್ ಮಾಸ್ಟರ್, ಬೆಂಗಳೂರು ಜಿ.ಪಿ.ಓ ರವರ ಗಮನಕ್ಕೆ ತರಬೇಕಾಗಿ ವಿನಂತಿ. ಮೊದಲು ತೆರೆದ ಖಾತೆಯನ್ನು ಕ್ರಮಬದ್ದ ಖಾತೆ ಎಂದು ಗುರುತಿಸಿ ಅದನ್ನು ಮಾತ್ರ ಮುಂದುವರಿಸಲು ಅವಕಾಶ ಇದ್ದು ಎರಡನೇ ಖಾತೆಗೆ ಜಮಾ ಆದ ಹಣದ ಮೇಲೆ ಬಡ್ಡಿ ನೀಡಲಾಗುವುದಿಲ್ಲ. ಕ್ರಮವಲ್ಲದ ಖಾತೆಗೆ ಕರ್ನಾಟಕ ಸರಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ವತಿಯಿಂದ ಪ್ರತಿ ವರ್ಷ ಹಣ ಜಮಾ ಮಾಡಲು ಆಗುವುದಿಲ್ಲ. ಈ ವಿಷಯವನ್ನು ಅವರಿಗೆ ಮನವರಿಕೆ ಮಾಡಿ ಕೊಡಿ.

13. ಈಗಾಗಲೇ ನೀಡಿರುವ ಪಾಸ್ ಪುಸ್ತಕದಲ್ಲಿ ಹಾಗೂ ಖಾತೆ ತೆರೆಯುವ ಅರ್ಜಿಯಲ್ಲಿ ಈ ಕೆಳಗಿನ ವ್ಯತ್ಯಾಸಗಳು ಕಂಡು ಬಂದಲ್ಲಿ ಏನು ಮಾಡಬೇಕು.

www.karnatakapost.gov.in ನಲ್ಲಿ ನಿಮಗೆ ಯಾವ ವಿಷಯದ ಬಗ್ಗೆ ದಾಖಲೆ ಸರಿ ಪಡಿಸಬೇಕೋ ಅದನ್ನು ಆಯ್ಕೆ ಮಾಡಿ ಭಾಗ್ಯಲಕ್ಷ್ಮೀ ID ಹಾಕಿ ನಿವೇದನೆಯ ನಮೂನೆಯನ್ನು ಪ್ರಿಂಟ್ ಮಾಡಿ ಸಹಿ ಮಾಡಿ ಸೂಕ್ತ ದಾಖಲೆಯೊಂದಿಗೆ "ಚೀಫ್ ಪೋಸ್ಟ್ ಮಾಸ್ಟರ್" ಬೆಂಗಳೂರು ಜಿ.ಪಿ.ಓ. 560001 ರವರಿಗೆ ಕಳುಹಿಸಿಕೊಡಿ.

ಅ) ಫಲಾನುಭವಿ ಮಗುವಿನ ಹೆಸರು ತಪ್ಪಾಗಿದ್ದಲ್ಲಿ – ಸರಿ ಪಡಿಸಲು ನಿವೇದನೆ ಸಲ್ಲಿಸುವದರೊಂದಿಗೆ ಸೂಕ್ತ ದಾಖಲೆ ಅಂದರೆ ಸರಿಯಾದ ಹೆಸರಿರುವ ಜನನ ಪ್ರಮಾಣ ಪತ್ರ ಒದಗಿಸತಕ್ಕದ್ದು.

ಆ) ಪೋಷಕರ ಹೆಸರು ತಪ್ಪಾಗಿದ್ದಲ್ಲಿ – ಸರಿ ಪಡಿಸಲು ನಿವೇದನೆ ಸಲ್ಲಿಸುವುದರೊಂದಿಗೆ ಸರಿಯಾದ ಹೆಸರಿರುವ ಗುರುತಿನ ಪುರಾವೆಯ ದಾಖಲೆಯ ಪ್ರತಿ ಒದಗಿಸತಕ್ಕದ್ದು.

ಇ) ಫಲಾನುಭವಿ ಮಗುವಿನ ಜನನ ದಿನಾಂಕ ತಪ್ಪಾಗಿದ್ದಲ್ಲಿ – ಸರಿ ಪಡಿಸಲು ನಿವೇದನೆ ಸಲ್ಲಿಸುವದರೊಂದಿಗೆ ಸೂಕ್ತ ದಾಖಲೆ ಅಂದರೆ ಸರಿಯಾದ ಹೆಸರಿರುವ ಜನನ ಪ್ರಮಾಣ ಪತ್ರ ಒದಗಿಸತಕ್ಕದ್ದು

ಈ) ವಿಳಾಸ ತಪ್ಪಾಗಿದ್ದಲ್ಲಿ – ಸರಿ ಪಡಿಸಲು ನಿವೇದನೆ ಸಲ್ಲಿಸುವುದರೊಂದಿಗೆ ಸರಿಯಾದ ಈಗಿನ ವಿಳಾಸ ಇರುವ ವಿಳಾಸದ ಪುರಾವೆಯ ಪ್ರತಿಯನ್ನು ಒದಗಿಸತಕ್ಕದ್ದು.

ಉ) ಮೊದಲನೇ ಪುಟದ ಪ್ರಿಂಟ್ ಸರಿಯಾಗಿ ಮುದ್ರಿತವಾಗಿಲ್ಲದಲ್ಲಿ – ಸರಿ ಪಡಿಸಲು ನಿವೇದನೆಯೊಂದಿಗೆ ಪಾಸ್ ಪುಸ್ತಕವನ್ನು ಕಳುಹಿಸಿ

14. ಖಾತೆ ತೆರೆಯುವ ಅರ್ಜಿಯಲ್ಲಿ ಮಾದರಿ ಸಹಿ ಬಗ್ಗೆ ತಿಳಿಸಿ.

ಖಾತೆ ತೆರೆಯುವ ಅರ್ಜಿಯಲ್ಲಿ ಅರ್ಜಿದಾರರಿಂದ ಅಂದರೆ ಮಗುವಿನ ಪರವಾಗಿ ತಾಯಿಯಿಂದ 3 ಮಾದರಿ ಸಹಿ ಪಡೆಯತಕ್ಕದ್ದು.

15. ಭಾಗ್ಯಲಕ್ಷ್ಮೀ ಯೋಜನೆಯ ಅಡಿ ಖಾತೆಗೆ ಯಾರನ್ನು ನಾಮಿನಿ ಮಾಡಬೇಕು ?

ಭಾಗ್ಯಲಕ್ಷ್ಮೀ ಯೋಜನೆಯ ಅಡಿ ಖಾತೆಯು ಫಲಾನುಭವಿ ಹೆಣ್ಣು ಮಗುವಿನ ಹೆಸರಿನಲ್ಲಿ ಖಾತೆ ಊರ್ಜಿತದಲ್ಲಿರುತ್ತದೆ. ತಾಯಿ ಸದರಿ ಖಾತೆಯಲ್ಲಿ ಪೋಷಕಿಯಾಗಿದ್ದು ನಾಮಿನಿ ಕೂಡ ಆಗಿರುತ್ತಾರೆ. ತಾಯಿ ಬದುಕದೇ ಇದ್ದಲ್ಲಿ ಆಗ ತಂದೆ ನಾಮಿನಿಯಾಗಿ ಗುರುತಿಸತಕ್ಕದ್ದು. ಒಂದು ವೇಳೆ ಇಬ್ಬರೂ ಜೀವಂತ ಇಲ್ಲದೇ ಇದ್ದಲ್ಲಿ ಕಾನೂನು ರೀತ್ಯಾ ಪೋಷಕರು ನಾಮಿನಿ ಯಾಗಿ ಗುರುತಿಸಬಹುದು.

16. ನಾಮ ನಿರ್ದೇಶನ ನಮೂನೆಯಲ್ಲಿ ಅರ್ಜಿದಾರರು ಅನಕ್ಷರಸ್ಥ ರಾಗಿದ್ದಲ್ಲಿ ಸಾಕ್ಷಿ ಸಹಿ ಎರಡು ಇವೆ ಯಾರ ಸಹಿ ಮಾಡಿಸಬೇಕು
ಅರ್ಜಿ ನಮೂನೆಯನ್ನು ಭರ್ತಿ ಮಾಡಲು ಸಹಾಯ ಮಾಡುವವರ ಹಾಗೂ ಇಲಾಖೆಯ ಅಥವಾ ಸಾರ್ವಜನಿಕರಲ್ಲಿ ಅರ್ಜಿ ಭರ್ತಿ ಮಾಡುವ ಸಂದರ್ಭದಲ್ಲಿ ಹಾಜರಿರುವವರ ಸಾಕ್ಷಿಯ ಸಹಿ ಪಡೆಯಿರಿ.

17. ಭಾಗ್ಯಲಕ್ಷ್ಮೀ ಖಾತೆ ತೆರೆದ ನಂತರ ತಾಯಿ (natural guardian) ಮೃತಪಟ್ಟಲ್ಲಿ ಏನು ಮಾಡಬೇಕು ?

ಪೋಷಕರ ಬದಲಾವಣೆಗಾಗಿ ನಿವೇದನೆಯನ್ನು ಮರಣ ಪ್ರಮಾಣ ಪತ್ರ ಹಾಗೂ ತಂದೆಯ ಗುರುತಿನ ಹಾಗೂ ವಿಳಾಸದ ಪುರಾವೆಯೊಂದಿಗೆ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ರವರಿಗೆ ಸಂಬಂಧಿತ ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಮೂಲಕ ಕಳುಹಿಸತಕ್ಕದ್ದು. ಇದೇ ರೀತಿ ಸ್ವಭಾವಿಕ ಪೋಷಕರು (ತಂದೆ ಹಾಗೂ ತಾಯಿ) ಇಬ್ಬರೂ ಮೃತ ಪಟ್ಟಲ್ಲಿ ಕಾನೂನು ರೀತ್ಯಾ ಪೋಷಕರ ಹೆಸರಲ್ಲಿ ಬದಲಾವಣೆ ಮಾಡಲು ಸೂಕ್ತ ಪುರಾವೆಯೊಂದಿಗೆ ನಿವೇದನೆಯನ್ನು ಮೇಲಿನಂತೆ ಕಳುಹಿಸಿ.

18. ಭಾಗ್ಯಲಕ್ಷ್ಮೀ ಯೋಜನೆಯ ಸುಕನ್ಯಾ ಸಮೃದ್ಧಿ ಖಾತೆಯಲ್ಲಿ ವೈಯಕ್ತಿಕವಾಗಿ ಹಣ ಕಟ್ಟಬಹುದೇ ?

ಖಂಡಿತವಾಗಿಯೂ. ಕೋರ್ ಬ್ಯಾಂಕಿಂಗ್ ಸೌಲಭ್ಯವಿರುವ ಯಾವುದೇ ಪ್ರಧಾನ / ಉಪ ಅಂಚೆ ಕಚೇರಿಯಲ್ಲಿ ವಾರ್ಷಿಕ ಮಿತಿ ರೂ.1.5 ಲಕ್ಷ ಮೀರದಂತೆ (ಸರಕಾರದ ವತಿಯಿಂದ ಜಮಾ ಮಾಡಲಾದ ರೂ. 3000/- ವನ್ನು ಸೇರಿಸಿ) ಕಟ್ಟಬಹುದು. ಯಾವುದೇ ಶಾಖಾ ಅಂಚೆ ಕಚೇರಿಯಲ್ಲಿ ಹಣ ಜಮಾ ಮಾಡಲು ಆಗುವುದಿಲ್ಲ.

ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್ ಖಾತೆ ತೆರೆಯುವುದರ ಮೂಲಕ ಬ್ಯಾಂಕ್ ಎಕೌಂಟ್ ಮೂಲಕ ಆನ್ಲೈನ್ ನಲ್ಲಿ ಸುಕನ್ಯಾ ಸಮೃದ್ಧಿ ಖಾತೆಯಲ್ಲಿ ಹಣ ಜಮಾ ಮಾಡಬಹುದು.

19. ಭಾಗ್ಯಲಕ್ಷ್ಮೀ ಸುಕನ್ಯಾ ಸಮೃದ್ಧಿ ಖಾತೆಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಗಳಿಗೆ ಅಂಚೆ ಕಚೇರಿಯಲ್ಲಿ ಎಲ್ಲಿ ಸಂಪರ್ಕ ಮಾಡಬೇಕು ?

ಭಾಗ್ಯಲಕ್ಷ್ಮೀ ಯೋಜನೆಗೆ ಬೆಂಗಳೂರು ಜಿ.ಪಿ.ಓ. ಅನ್ನು ಕೇಂದ್ರ ಸಂಪರ್ಕ ಅಂಚೆ ಕಚೇರಿಯಾಗಿ ಗುರುತಿಸಲಾಗಿದ್ದು ಭಾಗ್ಯಲಕ್ಷ್ಮೀ ಅಂಚೆ ಕೇಂದ್ರ **ದೂರವಾಣಿ ಸಂಖ್ಯೆ – 080 – 22850070** ನೇರವಾಗಿ ಸಂಪರ್ಕಿಸಬಹುದು.

**ಭಾಗ್ಯಲಕ್ಷ್ಮೀ email ಐಡಿ** ಸದ್ಯದಲ್ಲೇ ಎಲ್ಲರಿಗೂ ತಿಳಿಸಲಾಗುವುದು.

ಸ್ಥಳೀಯ ಅಂಚೆ ಅಧೀಕ್ಷಕರು / ಹಿರಿಯ ಅಂಚೆ ಅಧೀಕ್ಷಕರು ಇವರ contact number ಸಂಪರ್ಕ ವಿವರಗಳನ್ನು ನೀಡಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಇವರನ್ನು ಸಂಪರ್ಕಿಸಿ. ನಿಮ್ಮ ಕಚೇರಿಯಲ್ಲಿ ನಿಮ್ಮ ಉದ್ಯೋಗಿಗಳಿಗೆ ಮಾಹಿತಿ ಶಿಬಿರ ಏರ್ಪಡಿಸುವಲ್ಲಿ ನಿಮ್ಮ ಜಿಲ್ಲೆಗೆ ಸಂಬಂಧಿಸಿದ ಅಂಚೆ ಅಧೀಕ್ಷಕರನ್ನು ಸಂಪರ್ಕಿಸಿ. ಈ ನಿಟ್ಟಿನಲ್ಲಿ ಯಾವುದೇ ಸಹಾಯ ಬೇಕಾದಲ್ಲಿ ಅಂಚೆ ಸಹಾಯಕ ನಿರ್ದೇಶಕರು, ವಿತ್ತೀಯ ಸೇವೆ, ಬೆಂಗಳೂರು-1. ಮೊಬೈಲ್ ಸಂಖ್ಯೆ 9480887338 ಯನ್ನು ಸಂಪರ್ಕಿಸಿ.

20. ಭಾಗ್ಯಲಕ್ಷ್ಮೀ ಯೋಜನೆಯ ಅಡಿ ಬಾಂಡ್ ಬರುತ್ತದೆಯೇ ?

ಭಾಗ್ಯಲಕ್ಷ್ಮೀ ಯೋಜನೆಯ ಅಡಿ ತೆರೆಯಲಾದ ಸುಕನ್ಯಾ ಸಮೃದ್ಧಿ ಖಾತೆ ಗೆ ಸಂಬಂಧಿಸಿದ ಪಾಸ್ ಪುಸ್ತಕ ನೀಡಲಾಗುತ್ತದೆ. ಪಾಸ್ ಪುಸ್ತಕವನ್ನು ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ನೇರವಾಗಿ ಬೆಂಗಳೂರು ಜಿ.ಪಿ.ಓ. ದಿಂದ ಕಳುಹಿಸಿ ಕೊಡಲಾಗುವುದು.

21. ಭಾಗ್ಯಲಕ್ಷ್ಮೀ ಯೋಜನೆಗೆ ಸಂಬಂದಿಸಿದಂತೆ ಬಿ.ಪಿ.ಎಲ್. ಕಾರ್ಡ್ ಪಡೆಯುವುದು ಕಡ್ಡಾಯವೇ ? ತಾಯಿಯ ಹೆಸರು ಇರುವ ಕಾರ್ಡ್ ಕಡ್ಡಾಯವೇ?

ಭಾಗ್ಯಲಕ್ಷ್ಮೀ ಯೋಜನೆಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನೆಯಾಗಿದ್ದು ಈ ಯೋಜನೆಯ ಅಡಿ ಬಿ.ಪಿ.ಎಲ್. ಕಾರ್ಡ್ ಹೊಂದಿರುವ ಮಕ್ಕಳನ್ನು ಮಾತ್ರ ಪರಿಗಣಿಸಲಾಗುತ್ತದೆ. ಇದಕ್ಕೆ ಕುಟುಂಬದ ಯಜಮಾನನ ಹೆಸರಿನಲ್ಲಿರುವ ಬಿ.ಪಿ.ಎಲ್ ಕಾರ್ಡ್ ಪ್ರಸ್ತುತ ಪಡಿಸಬೇಕಾಗುತ್ತದೆ.

ಬಿ.ಪಿ.ಎಲ್. ಕಾರ್ಡ್ ನಲ್ಲಿ ತಾಯಿಯ ಹೆಸರು ಇರಬೇಕಾದ್ದು ಕಡ್ಡಾಯವಲ್ಲ. ಆದರೆ ತಾಯಿಯ ಅಂದರೆ ಸುಕನ್ಯಾ ಸಮೃದ್ಧಿ ಖಾತೆ ಅಪ್ರಾಪ್ತ ಮಗುವಿನ ಹೆಸರಿನಲ್ಲಿ ತೆರೆಯುವಾಗ ನಿಗದಿ ಪಡಿಸಿದ ಪೋಷಕರ ಗುರುತಿನ ಹಾಗೂ ವಿಳಾಸದ ಪುರಾವೆ ನೀಡುವುದು ಕಡ್ಡಾಯವಾಗಿರುತ್ತದೆ.

22. ಒಂದಕ್ಕಿಂತ ಹೆಚ್ಚಿನ ಸುಕನ್ಯಾ ಸಮೃದ್ಧಿ ಖಾತೆ ಇದ್ದಲ್ಲಿ ಅದರ ವಿವರಗಳನ್ನು ವೆಬ್ ಸೈಟ್ ನಲ್ಲಿ ನೀಡುವಾಗ ಯಾರ CIF ಐಡಿ ಕೊಡತಕ್ಕದ್ದು.

ವೈಯಕ್ತಿಕವಾಗಿ ತೆರೆದ ಸುಕನ್ಯಾ ಸಮೃದ್ಧಿ ಖಾತೆಯ ವಿವರಗಳನ್ನು ವೆಬ್ ಸೈಟ್ ನಲ್ಲಿ ನೀಡುವಾಗ –

ಅ) ಖಾತೆದಾರರ ಅಂದರೆ ಹೆಣ್ಣು ಮಗುವಿನ CIF ಐಡಿ

ಆ) ಖಾತೆ ತೆರೆಯುವಾಗ ಪೋಷಕರಾಗಿ ಸಹಿ ಮಾಡಿರುತ್ತಾರೆಯೋ ಅವರ CIF ಐಡಿ

23. ಸುಕನ್ಯಾ ಸಮೃದ್ಧಿ ಖಾತೆ ತೆರೆದ ನಂತರ ಮಗುವಿನ ಮರಣ ಹೊಂದಿದ್ದಲ್ಲಿ ಏನು ಮಾಡಬೇಕು ?

ಖಾತೆಯಲ್ಲಿ ಜಮಾ ಇರುವ ಹಣ ಬಡ್ಡಿ ಸಹಿತ ಪಡೆಯಲು ನಾಮಿನಿ ಅರ್ಹರು. ಈ ನಿಟ್ಟಿನಲ್ಲಿ ಕೂಡಲೇ ಸಂಬಂಧಿತ ನಾಮಿನಿ ಯಿಂದ ಕ್ಲೈಮ್ ಅರ್ಜಿಯನ್ನು ಪಡೆದು ಪಾಸ್ ಪುಸ್ತಕದ ಜೊತೆ ಸಂಬಂದಿತ ಜಿಲ್ಲಾ ಉಪ ನಿರ್ದೇಶಕರು , ಮಹಿಳಾ ಮತ್ತು ಮಕ್ಕಳ ಇಲಾಖೆ ಇವರ ಮೂಲಕ ಮುಂದಿನ ಕ್ರಮಕ್ಕಾಗಿ ಕೂಡಲೇ "ಚೀಫ್ ಪೋಸ್ಟ್ ಮಾಸ್ಟರ್, ಬೆಂಗಳೂರು ಜಿ.ಪಿ.ಓ. ಇವರಿಗೆ ಕಳುಹಿಸಿ ಕೊಡತಕ್ಕದ್ದು.

ಫಲಾನುಭವಿಗಳ ಪಟ್ಟಿಯಿಂದ ಈ ಮೃತ ಹೆಣ್ಣು ಮಗುವಿನ ಹೆಸರನ್ನು ತೆಗೆದು ಹಾಕಲು ಸೂಕ್ತ ಕ್ರಮ ಮಹಿಳಾ ಮತ್ತು ಮಕ್ಕಳ ಇಲಾಖೆ ಮೂಲಕ ತೆಗೆದುಕೊಳ್ಳಲಾಗುತ್ತದೆ.

24. ತಂದೆ ಮರಣ ಹೊಂದಿದ್ದು ತಾಯಿ ಬುದ್ದಿ ಮಾಂದ್ಯ ಇದ್ದಲ್ಲಿ ಪೋಷಕರನ್ನಾಗಿ ಯಾರನ್ನು ಗುರುತಿಸಬೇಕು.

ಸ್ವಾಭಾವಿಕವಾಗಿ ತಾಯಿ ಅಥವಾ ತಂದೆ ಈ ಖಾತೆಯನ್ನು ಮಗುವಿನ ಅಪ್ರಾಪ್ತ ವಯಸ್ಸಿನ ಸಂದರ್ಭದಲ್ಲಿ ಪೋಷಕರಾಗಿರುತ್ತಾರೆ. ಆದರೆ ಮೇಲೆ ತಿಳಿಸಿದ ಕಾರಣದಿಂದ ಅಥವಾ ಬೇರೆ ಯಾವುದೇ ಕಾರಣ ಗಳಿಂದ ಸ್ವಾಭಾವಿಕ ಪೋಷಕರು ಈ ಜವಾಬ್ದಾರಿ ನಿಭಾಯಿಸಲು ಆಗದಿದ್ದಲ್ಲಿ ಕಾನೂನು ರೀತ್ಯ ಯಾರು ಮಗುವಿನ ಪೋಷಕರೋ ಅವರೇ ಈ ಖಾತೆಯನ್ನು ನಿರ್ವಹಿಸಲು ಪೋಷಕರಾಗಿರುತ್ತಾರೆ. ಸಂಬಂಧಿತ ದಾಖಲೆಗಳನ್ನು ಪ್ರಸ್ತುತ ಪಡಿಸತಕ್ಕದ್ದು.

25. ಸುಕನ್ಯಾ ಸಮೃದ್ದಿ ಖಾತೆಯ ಪಾಸ್ ಪುಸ್ತಕವನ್ನು ವಿತರಣೆ ಮಾಡುವ ಸಂಧರ್ಭದಲ್ಲಿ ಕುಟುಂಬದ 3 ಮಕ್ಕಳಿಗೂ ಸುಕನ್ಯಾ ಸಮೃದ್ದಿ ಖಾತೆ ಇದ್ದಲ್ಲಿ ಪಾಸ್ ಪುಸ್ತಕ ವಿತರಣೆ ಮಾಡಬೇಕೋ ಬೇಡವೋ ?

ಸುಕನ್ಯಾ ಸಮೃದ್ದಿ ಯೋಜನೆಯ ನಿಯಮಗಳ ಪ್ರಕಾರ ಒಂದು ಕುಟುಂಬದ ಎರಡು ಅರ್ಹ ಹೆಣ್ಣು ಮಕ್ಕಳು ಮಾತ್ರ ಪಾಸ್ ಪುಸ್ತಕ ಪಡೆಯಲು ಅರ್ಹರು. ಆದುದರಿಂದ ಇಂತಹ ಪ್ರಕರಣಗಳನ್ನು ಕೂಡಲೇ ಉಪ ನಿರ್ದೇಶಕರ ಗಮನಕ್ಕೆ ತನ್ನಿ ಮತ್ತು ಅವರಿಂದ ಸೂಕ್ತ ಮಾರ್ಗದರ್ಶನ ಪಡೆಯಿರಿ.

26. ವಿಳಾಸ ಪೂರಾವೆ ದಾಖಲೆ ಸಂಖ್ಯೆ/ ಜಾರಿ ಮಾಡಿದ ದಿನಾಂಕ/ ಜಾರಿ ಮಾಡಿದ ಅಧಿಕಾರಿ ಈ ಬಗ್ಗೆ ಮಾರ್ಗದರ್ಶನ ನೀಡಿ.

ಸಾಧಾರಣವಾಗಿ 1) ಜನನ ಪ್ರಮಾಣ ಪತ್ರ 2) ಬಿ.ಪಿ.ಎಲ್. ಕಾರ್ಡ್ 3) ಆಧಾರ್ ಕಾರ್ಡ್ ದಾಖಲೆಗಳನ್ನು ಪ್ರಸ್ತುತ ಪಡಿಸಬೇಕು.

ಈ ದಾಖಲೆಗಳ ಸಂಖ್ಯೆ ಸದರಿ ದಾಖಲೆಗಳ ಮೇಲೆಯೇ ಲಭ್ಯವಿರುತ್ತದೆ. ಇನ್ನು ಮುಂದಿನ ದಿನಗಳಲ್ಲಿ ಈ ದಾಖಲೆಗಳನ್ನು ಆನ್ಲೈನ್ ಪರಿಶೀಲನೆ ಮಾಡಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗುತ್ತಿದ್ದು ಜನನ ಪ್ರಮಾಣ ಪತ್ರ – ಈಜನ್ಮ ವೆಬ್ ಸೈಟ್ ಮೂಲಕ ಬಿ.ಪಿ.ಎಲ್. ಕಾರ್ಡ್ ನ್ನು ಆಹಾರ ವೆಬ್ ಸೈಟ್ ಮೂಲಕ ಹಾಗೂ ಆಧಾರ್ ಕಾರ್ಡ್ ನ್ನು UIDAI ವೆಬ್ ಸೈಟ್ ಮೂಲಕ ಮಾಡಲು ಈಗಾಗಲೇ ನಿರ್ಧರಿಸಲಾಗಿದೆ. ಆ ನಿಟ್ಟಿನಲ್ಲಿ ಈ ಪ್ರಮಾಣ ಪಾತ್ರಗಳ ಕ್ರಮ ಸಂಖ್ಯೆ ದಾಖಲಿಸುವುದು ಅನಿವಾರ್ಯ ಆಗಿರುತ್ತದೆ.

27. ಭಾಗ್ಯಲಕ್ಷ್ಮೀ ಯೋಜನೆಯ ಫಾರಂ ಮತ್ತು ಸಂಬಂಧಿತ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆಫ್ ಲೋಡ್ ಮಾಡುವುದನ್ನು ಮುಂದುವರಿಸಬೇಕೇ?

ಭಾಗ್ಯಲಕ್ಷ್ಮೀ ಯೋಜನೆಯ ಅಡಿ ಸುಕನ್ಯಾ ಸುಮೃದ್ದಿ ಖಾತೆ ತೆರೆಯಲು ಭಾರತೀಯ ಅಂಚೆ ಇಲಾಖೆಯ ನಿಗದಿತ ಅರ್ಜಿ ನಮೂನೆ , ಕೆ.ವೈ.ಸಿ. ಫಾರಂ , ಇತ್ಯಾದಿ ಭರ್ತಿ ಮಾಡಿ ನಿಗದಿತ ದಾಖಲೆಗಳೊಂದಿಗೆ ಬೆಂಗಳೂರು ಜಿ.ಪಿ.ಓ. ಗೆ ಸಲ್ಲಿಸುವುದು ಕಡ್ಡಾಯವಾದುದರಿಂದ ಸ್ಕ್ಯಾನ್ ಮಾಡಿ ಅಪ್ಲೋಡ್ ಮಾಡಬೇಕಾಗಿಲ್ಲ. ಈ ಸೇವೆಯನ್ನು ವೆಬ್ ಸೈಟ್ ನಿಂದ ಹಿಂಪಡೆಯಲಾಗಿದೆ.

28. ಭಾಗ್ಯಲಕ್ಷ್ಮೀ ಯೋಜನೆಯ ಅಡಿ ತೆರೆಯಲಾದ ಸುಕನ್ಯಾ ಸಮೃದ್ಧಿ ಖಾತೆಯ ಮಗು ಹಾಗೂ ಪೋಷಕರು ವಲಸೆ ಹೋಗಿದ್ದಲ್ಲಿ ಏನು ಮಾಡಬೇಕು.

ಸಂಬಂಧಿತ ಫಲಾನುಭವಿಯ ಪೋಷಕರನ್ನು ಸಂಪರ್ಕಿಸಿ ಅವರಿಂದ ನಿಗದಿತ ದಾಖಲೆಗಳನ್ನು ಪಡೆಯಲು ಪ್ರಯತ್ನಿಸಿ ಹಾಗೂ ಪಾಸ್ ಪುಸ್ತಕವನ್ನು ಅವರಿಗೆ ಹಸ್ತಾಂತರಿಸಲು ಸೂಕ್ತ ವ್ಯವಸ್ಥೆ ಮಾಡಿರಿ. ಅವರು ಭಾರತದ ಯಾವ ಮೂಲೆಯಲ್ಲಿ ವಲಸೆ ಹೋಗಿದ್ದರೂ ಅವರ ಖಾತೆಗೆ ನಂತರದ ಜಮಾ ಹಣ ಮಾಡಲಾಗುವುದು ಹಾಗೂ ಅದರ ವಿವರಗಳನ್ನು ಅವರು ಪಾಸ್ ಪುಸ್ತಕದಲ್ಲಿ ಅವರಿಗೆ ಸಮೀಪದ ಅಂಚೆ ಕಚೇರಿಯಲ್ಲಿ ಪ್ರಿಂಟ್ ಮಾಡಿಸುವ ಮೂಲಕ ಪಡೆಯಬಹುದು.

ವಲಸೆ ಹೋದ ಫಲಾನುಭವಿ / ಪೋಷಕರು ಸಂಪರ್ಕಕ್ಕೆ ಸಿಗದೇ ಇದ್ದಲ್ಲಿ ಮುಂದಿನ ಕ್ರಮಕ್ಕಾಗಿ ಸಂಬಂದಿಸಿದ ಉಪ ನಿರ್ದೇಶಕರ ಗಮನಕ್ಕೆ ತನ್ನಿ.

29. ಗಂಡ ಹೆಂಡತಿ ಜಗಳದಲ್ಲಿ ಅಥವಾ ವಿವಾಹ ವಿಚ್ಛೇದನ ಸಂದರ್ಭದಲ್ಲಿ ಪೋಷಕರ ಹೆಸರು ಬದಲಾವಣೆ ಮಾಡಲು ಏನು ಕ್ರಮ ಕೈಗೊಳ್ಳಬೇಕು ?
ಪೋಷಕರ ಹೆಸರನ್ನು ತಾಯಿಯಿಂದ ತಂದೆಗೆ ಸಂಬಂಧಿತ ಉಪ ನಿರ್ದೇಶಕರ ಅನುಮತಿಯ ಮೇರೆಗೆ ಬದಲಾವಣೆ ಮಾಡಬಹುದು. ಸೂಕ್ತ ದಾಖಲೆಗಳನ್ನು ಒದಗಿಸಬೇಕು ಹಾಗೂ ಇದನ್ನು ಉಪ ನಿರ್ದೇಶಕರು ಪರಿಶೀಲಿಸಿ ಸರಿಯೆಂದು ಖಚಿತ ಪಡಿಸಿಕೊಳ್ಳಬೇಕು.

30. ಭರ್ತಿ ಮಾಡಿದ ಸುಕನ್ಯಾ ಸಮೃದ್ಧಿ ಖಾತೆಯ ಅರ್ಜಿಗಳನ್ನು ಎಲ್ಲಿಗೆ ಕಳುಹಿಸಿ ಕೊಡಬೇಕು ?
ಭರ್ತಿ ಮಾಡಿದ ಸುಕನ್ಯಾ ಸಮೃದ್ಧಿ ಖಾತೆಯ ಅರ್ಜಿಗಳನ್ನು ನಿಮ್ಮ ಜಿಲ್ಲೆಯ ಅಂಚೆ ಅಧೀಕ್ಷಕರ ಮೂಲಕ ಚೀಫ್ ಪೋಸ್ಟ್ ಮಾಸ್ಟರ್, ಬೆಂಗಳೂರು 560001 ಇವರಿಗೆ ಕಳುಹಿಸಿ ಕೊಡಬೇಕು.

31. ವೈಯಕ್ತಿಕ ಸುಕನ್ಯಾ ಸಮೃದ್ಧಿ ಖಾತೆಯನ್ನು ಬೆಂಗಳೂರು ಜಿ.ಪಿ.ಓ. ಗೆ ವರ್ಗಾವಣೆ ಮಾಡಲು ಪಡೆಯಬೇಕಾದ ವರ್ಗವಣಾ ಸೇವಾ ಶುಲ್ಕ ಎಷ್ಟು ?

ರೂ. 100/- ವರ್ಗಾವಣಾ ಸೇವಾ ಶುಲ್ಕ ಹಾಗೂ ಜಿಎಸ್‌ಟಿ ರೂ.18/- ಒಟ್ಟು ರೂ.118/- ಪಡೆದ ಬಗ್ಗೆ ಅಂಚೆ ಕಚೇರಿಯಿಂದ ಪಡೆದ ರಶೀದಿಯ ಪ್ರತಿಯನ್ನು ಲಗತ್ತಿಸಿ.

32. ಭಾಗ್ಯಲಕ್ಷ್ಮೀ ಸುಕನ್ಯಾ ಸಮೃದ್ಧಿ ಖಾತೆಯ ಅರ್ಜಿ ಬರದೇ ಇದ್ದಲ್ಲಿ ಏನು ಮಾಡಬೇಕು ?
www.karnatakapost.gov.in:4431/dwcd ಈ ವೆಬ್ ಸೈಟ್‌ನಲ್ಲಿ ಸರ್ಚ್ ಆಪ್ಷನ್ ಗೆ ಹೋಗಿ ಅಲ್ಲಿ ಭಾಗ್ಯಲಕ್ಷ್ಮಿ ಚೈಲ್ಡ್ ಐಡಿ ಕೊಡಿ. ಕೂಡಲೇ ವಿವರ ಬರುವುದು. ಅಲ್ಲಿ ಕಾಣಿಸುತ್ತಿರುವ "Generate AOF and KYC Link" ನ್ನು ಕ್ಲಿಕ್ ಮಾಡಿ. ಇಲ್ಲಿ ಅರ್ಜಿಯ ಪ್ರತಿಯನ್ನು ಪಡೆಯಬಹುದು.

33. ಮಕ್ಕಳು ಅನಾಥವಾಗಿದ್ದಾರೆ ಅಂತಹ ಸಂದರ್ಭದಲ್ಲಿ ಪೋಷಕರಾಗಿ ಯಾರನ್ನು ಸೂಚಿಸಬೇಕು.
ತಾಯಿ ಅಥವಾ ತಂದೆ ಫಲಾನುಭವಿ ಹೆಣ್ಣು ಮಗುವಿನ ಸ್ವಾಭಾವಿಕ ಪೋಷಕರಾಗಿರುತ್ತಾರೆ. ಯಾವುದೇ ಕಾರಣಕ್ಕೆ ಹೆಣ್ಣು ಮಗುವಿನ ತಾಯಿ ತಂದೆ ಜೀವಂತ ಇಲ್ಲದಲ್ಲಿ, ಅಥವಾ ಮರು ಮದುವೆ ಆಗಿ ಹೆಣ್ಣು ಮಗುವಿನ ಜವಾಬ್ದಾರಿಯನ್ನು ನೋಡಿಕೊಳ್ಳದೇ ಇದ್ದಲ್ಲಿ ಆಗ ಕಾನೂನು ರೀತ್ಯ ಯಾರು ಪೋಷಕರಗಿರುತ್ತಾರೋ ಅವರನ್ನೇ ಪೋಷಕರಾಗಿ ಗುರುತಿಸಲಾಗುವುದು. ಸೂಕ್ತ ದಾಖಲೆ ಒದಗಿಸಿ ಪೋಷಕರ ಹೆಸರನ್ನು ಬದಲಾವಣೆ ಮಾಡಲು ಅವಕಾಶ ಇದೆ.

34. ಪಾಸ್ ವರ್ಡ್ ಪ್ರತ್ಯೇಕ ವಾಗಿ ಜಿಲ್ಲಾ ಮಟ್ಟ ಹಾಗೂ ತಾಲೂಕು ಮಟ್ಟದಲ್ಲಿ ಕೊಡಲು ವ್ಯವಸ್ಥೆ ಮಾಡಬಹುದೇ ?
ಪಾಸ್ ವರ್ಡ್ ಪ್ರತ್ಯೇಕವಾಗಿ ಜಿಲ್ಲಾ ಮಟ್ಟ ಹಾಗೂ ತಾಲೂಕು ಮಟ್ಟದಲ್ಲಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ದಯವಿಟ್ಟು ನಿರೀಕ್ಷಿಸಿ.

35. ಕಳುಹಿಸಿರುವ ಪಾಸ್ ಪುಸ್ತಕ, ಅರ್ಜಿ ನಮೂನೆ ಕಳೆದು ಹೋದಲ್ಲಿ ಏನು ಮಾಡಬೇಕು ?

ಪಾಸ್ ಪುಸ್ತಕ ಕಳೆದು ಹೋದಲ್ಲಿ   ಪುನಃ ಪಡೆಯಲು ನಿಗದಿತ ಅರ್ಜಿಯನ್ನು ತುಂಬಿ ರೂ. 50/- + ಜಿಎಸ್‌ಟಿ ರೂ.9/- ಸ್ಥಳೀಯ ಅಂಚೆ ಕಚೇರಿಯಲ್ಲಿ ಕಟ್ಟಿ ರಶೀದಿ ಪಡೆದು ಅರ್ಜಿಯೊಂದಿಗೆ ಸಂಬಂಧಿತ ಉಪ ನಿರ್ದೇಶಕರ ಮೂಲಕ ಚೀಫ್ ಪೋಸ್ಟ್ ಮಾಸ್ಟರ್ ಬೆಂಗಳೂರು ಜಿ.ಪಿ.ಓ. ರವರಿಗೆ ಕಳುಹಿಸಿಕೊಡತಕ್ಕದ್ದು.

ಅರ್ಜಿಯ ಫಾರಂ ನ್ನು  ಪುನಃ  www.karnatakapost.gov.in:4431/dwcd ಈ ವೆಬ್ ಸೈಟ್‌ನಲ್ಲಿ ಸರ್ಚ್ ಆಪ್ಶನ್ ಗೆ ಹೋಗಿ ಅಲ್ಲಿ ಭಾಗ್ಯಲಕ್ಷ್ಮಿ ಚೈಲ್ಡ್ ಐಡಿ ಕೊಡಿ.  ಕೊಡಲೆ ವಿವರ ಬರುವುದು.  ಅಲ್ಲಿ ಕಾಣಿಸುತ್ತಿರುವ “Generate AOF and KYC Link” ನ್ನು ಕ್ಲಿಕ್ ಮಾಡಿ.  ಇಲ್ಲಿ ಅರ್ಜಿಯ ಪ್ರತಿಯನ್ನು ಪಡೆಯಬಹುದು.

36. ಯಾವುದೇ ಪ್ರಶ್ನೆಯಿದ್ದಲ್ಲಿ ನೇರಯಾಗಿ ವೆಬ್ ಸೈಟ್ ನಲ್ಲಿ ನಿಮ್ಮ ಪ್ರಶ್ನೆಯನ್ನೇ ಕೇಳಿ www.karnatakapost.gov.in:4431/dwcd  customer care  ಟಾಬ್ ಒತ್ತುವುದರ ಮೂಲಕ